ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BANGALORE - 560 085
Email: dsert.kar@nic.in Website: http://dsert.kar.nic.in
Phone : 080 - 26422372, 26422373, 26422374, Fax - 26422377
ಡಿಎಸ್‌ಇಆರ್‌ಟಿ DSERT

No: DPI/DSERT/E-con/Stu-ICT/16/2018-19

Date:02-08-2019

# ಸುತ್ತೋಲೆ

ವಿಷಯ: ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಬಳಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ED64, Mahiti 2016, Bengaluru ದಿನಾಂಕ:05-07-16

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ರಾಜ್ಯದ ಪ್ರೌಢಶಾಲೆಗಳಲ್ಲಿ ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮವನ್ನು (ಟ್ಯಾಲ್ಪ್) 2016-17ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿರುವುದನ್ನು ಸ್ಮರಿಸಿದೆ. ಈ ಕಾರ್ಯಕ್ರಮ ಈಗಾಗಲೇ ರಾಜ್ಯದ 4404 ಪ್ರೌಢಶಾಲೆಗಳ 12000 ಶಿಕ್ಷಕರುಗಳಿಗೆ ಇಂಡಕ್ಷನ್ ತರಬೇತಿ ನೀಡಲಾಗಿದ್ದು, ಮುಕ್ತ ಮೂಲಗಳಲ್ಲಿ ಲಭ್ಯ ಇ-ಕಂಟೆಂಟ್‌ನ್ನು ಬಳಸಿಕೊಂಡು ತರಗತಿ ಪ್ರಕ್ರಿಯೆಗಳನ್ನು ಉತ್ತಮಪಡಿಸುವ ಸಾಮರ್ಥ್ಯ ವೃದ್ಧಿಸಲಾಗಿದೆ. ರಾಜ್ಯದ 2500 ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು ಪ್ರೋಜೆಕ್ಟ್‌ಗಳನ್ನು ಒದಗಿಸಲಾಗಿದೆ.

2016-17ನೇ ಸಾಲಿನಲ್ಲಿ ಅಯ್ಕೆ ಮಾಡಿಕೊಳ್ಳಲಾದ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದೆ. ಈ ಕಂಪ್ಯೂಟರ್ ಲ್ಯಾಬ್‌ಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವುದಲ್ಲದೆ, ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕೌಶಲ್ಯಗಳನ್ನು ಒದಗಿಸಬೇಕಿದೆ. ಈ ಹಿನ್ನಲೆಯಲ್ಲಿ ಕೆಳಕಂಡ ಸೂಚನೆಗಳನ್ನು ಹೊರಡಿಸಿದೆ.

01. NCERT-CIET ರವರು ರೂಪಿಸಿರುವ ವಿದ್ಯಾರ್ಥಿ ಐಸಿಟಿ ಪಠ್ಯವಸ್ತು- ಪ್ರಥಮ ವರ್ಷ ಪಠ್ಯಕ್ರಮವನ್ನು ಬಳಸಿಕೊಳ್ಳತಕ್ಕದ್ದು.
02. ವಿದ್ಯಾರ್ಥಿಗಳ ಕಂಪ್ಯೂಟರ್ ಕಲಿಕೆಯನ್ನು ಪ್ರತ್ಯೇಕ ವಿಷಯವಾಗಿ ಬೋಧಿಸತಕ್ಕದ್ದಲ್ಲ.
03. ವಿದ್ಯಾರ್ಥಿಗಳ ಪಠ್ಯಕ್ರಮ ಕಲಿಕೆಗೆ ಪೂರಕವಾಗುವಂತಹ ಚಟುವಟಿಕೆಗಳ ಜೊತೆ ಮಿಳಿತಗೊಳಿಸುವುದು.
04. ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕಲಿಕೆಗೆ ಶಾಲಾ ವೇಳಾಪಟ್ಟಿಯಲ್ಲಿ ಕನಿಷ್ಠ ವಾರಕ್ಕೆ 03 ತರಗತಿಗಳಂತೆ ವರ್ಷಕ್ಕೆ 30 ವಾರಗಳಿಗೆ ನಿಗಧಿಪಡಿಸಿ ವೇಳಾಪಟ್ಟಿಯನ್ನು ಸೂಕ್ತವಾಗಿ ಮಾರ್ಪಡಿಸತಕ್ಕದ್ದು.
05. ಟ್ಯಾಲ್ಪ್ ಅಡಿ ತರಬೇತಿ ಹೊಂದಿದ ಎಲ್ಲಾ ಶಿಕ್ಷಕರು ಕಂಪ್ಯೂಟರ್ ಶಿಕ್ಷಣ ನೀಡಲು ಜವಾಬ್ದಾರಾಗಿರುತ್ತಾರೆ.
06. ವಿದ್ಯಾರ್ಥಿ ಐಸಿಟಿ ಪಠ್ಯವಸ್ತುವನ್ನು ಆಫ್‌ಲೈನ್ ಮೋಡ್‌ನಲ್ಲಿ ನೀಡಲಾಗಿದ್ದು, ಅದನ್ನು ಪ್ರತಿ ಕಂಪ್ಯೂಟರ್‌ನಲ್ಲಿ ಅಳವಡಿಸಿ ಬಳಸಿಕೊಳ್ಳಕ್ಕದ್ದು.
07. ಶಾಲಾ ಪೂರ್ವ ಮತ್ತು ನಂತರದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಬೋಧನೆ ನಡೆಸಲಾಗುತ್ತಿದ್ದರೆ ಅಂತಹ ಅವಧಿಯಲ್ಲಿ ಸಹ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಲ್ಯಾಬ್‌ನ ಬಳಕೆಗೆ ಮುಕ್ತ ಅವಕಾಶ ಕಲ್ಪಿಸತಕ್ಕದ್ದು.

ಪು.ತಿ.ನೋ

08. ಪ್ರತಿ ದಿನ ಕಂಪ್ಯೂಟರ್ ಲ್ಯಾಬ್ ಬಳಕೆ ಕುರಿತು ಒಂದು ಲಾಗ್ ಪುಸ್ತಕವನ್ನು ನಿರ್ವಹಿಸಿ ಕೆಳಗಿನ ನಮೂನೆಯಲ್ಲಿ ದಾಖಲಿಸುವುದು.

2019-20ನೇ ಸಾಲಿನಲ್ಲಿ ಪ್ರಾಯೋಗಿಕವಾಗಿ 8,9 ಮತ್ತು 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೂ ಪಠ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು ನಂತರದ ಶೈಕ್ಷಣಿಕ ವರ್ಷಗಳಲ್ಲಿ ಈ ಕುರಿತು ಹೆಚ್ಚಿನ ನಿರ್ದೇಶನಗಳನ್ನು ನೀಡಲಾಗುವುದು.

| ಕ್ರ.ಸಂ | ದಿನಾಂಕ | ಅವಧಿ ಇಂದ-ವರೆಗೆ | ತರಗತಿ | ವಿದ್ಯಾರ್ಥಿಗಳ ಸಂಖ್ಯೆ | ವಿಷಯ | ಶಿಕ್ಷಕರ ಹೆಸರು |
|---|---|---|---|---|---|---|
| | | | | | | |

ಮೇಲ್ಕಾಣಿಸಿದ ಅಂಶಗಳಂತೆ ಕಂಪ್ಯೂಟರ್ ಲ್ಯಾಬ್ ಸ್ಥಾಪನೆಯಾಗಿರುವ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳ ಮುಖ್ಯಶಿಕ್ಷಕರುಗಳು ಅಗತ್ಯ ಕ್ರಮವಹಿಸಿ, ಕಂಪ್ಯೂಟರ್ ಶಿಕ್ಷಣದ ಪ್ರಯೋಜನವನ್ನು ಗರಿಷ್ಠ ವಿದ್ಯಾರ್ಥಿಗಳಿಗೆ ತಲುಪಿಸಿ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯ ಸಫಲತೆಗೆ ಶ್ರಮಿಸಲು ತಿಳಿಸಿದೆ.

ಆಯುಕ್ತರು
ಸರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು-01

ರವರಿಗೆ,

01. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಲರು ಹಾಗೂ ಉಪನಿರ್ದೇಶಕರು (ಆಡಳಿತ) ಸೂಕ್ತ ಕ್ರಮಕ್ಕಾಗಿ.
02. ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು, ಬಿ.ಆರ್.ಸಿ ಹಾಗೂ ಸಂಬಂಧಿಸಿದ ಮುಖ್ಯಶಿಕ್ಷಕರು ಸೂಕ್ತ ಕ್ರಮಕ್ಕಾಗಿ.